ಓ ಎಸ್ ನಂಃ **44/2017**

ಡಿ.ಡಬ್ಲ್ಯುಃ **2**

<u>ದಿನಾಂಕಃ 15-09-2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ-</u>

ನಾನು ವಿದ್ಯಾಭ್ಯಾಸ ಮಾಡಿಲ್ಲ. ಪ್ರಮಾಣಪತ್ರದಲ್ಲಿರುವ ವಿಚಾರ ನನಗೆ ಗೊತ್ತಿಲ್ಲ 75/1998 ಪ್ರಕರಣದಲ್ಲಿ ನನ್ನ ಸಹೋದರ ಉದಯ ಕುಮಾರ ಪಾಪಚ್ಚಿ ಎಂಬುವವರು ಪ್ರಕರಣ ದಾಖಲು ಮಾಡಿದ್ದರು. ನಾನು ಆಗ ಗಾಡಿಗಳನ್ನು ತೊಳೆದುಕೊಂಡು ಜೀವನ ಮಾಡುತ್ತಿದ್ದೆ. ಆ ಪ್ರಕರಣದಲ್ಲಿ ಸಾಕ್ಷಿ ಕೊಟ್ಟಿರುವುದಿಲ್ಲ. ನಾನು ವಕೀಲರನ್ನು ನೇಮಿಸಿಕೊಂಡಿಲ್ಲ. ನೀವು ಪತ್ರಕ್ಕೆ ಓದಿ ತಿಳಿದುಕೊಂಡು ಸಹಿ ಮಾಡುತ್ತೀರಾ ಎಂದರೆ ಸಾಕ್ಷಿದಾರರು ನನಗೇನು ಗೊತ್ತಿಲ್ಲ ಸಹಿ ಹಾಕಲು ಕೇಳಿದರು,ಆದ್ದರಿಂದ ಸಹಿ ಹಾಕಿದ್ದೇನೆನ್ನುತ್ತಾರೆ. ವಿಜಯಲಕ್ಷ್ಮೀ ನನ್ನ ಸಹೋದರಿ. ಅವರು ಏನು ವಿದ್ಯಾಭ್ಯಾಸ ಮಾಡಿದ್ದಾರೆಂದು ಗೊತ್ತಿಲ್ಲ. ಅವರೂ ಕೂಡಾ ದಾಖಲೆಗೆ ಸಹಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಡಿ-1 ರಲ್ಲಿ ನಾನು ಸಹಿ ಮಾಡಿದ್ದೇನೆಂದರೆ ಸರಿ. ಆ ರೀತಿ 4 ಸಹಿಗಳನ್ನು ಮಾಡಿದ್ದೇನೆಂದರೆ ಸರಿ. ಅದರಲ್ಲಿ ನನ್ನ ಎರಡು ಭಾವಚಿತ್ರ ಕೂಡಾ ಇರುತ್ತದೆಂದರೆ ಸರಿ. ವಾದಿ ಮತ್ತು ಪ್ರತಿವಾದಿ, ಪ್ರತಿವಾದಿ 3 ರವರು ವಿದ್ಯಾವಂತರು, ಬುದ್ದಿವಂತರು ಎಂದರೆ ಸರಿ. ಅವರಿಗೆ ದುಡುಕಿನ ಸ್ವಭಾವ, ತಿಳಿಯದೇ ದಾಖಲೆಗೆ ಸಹಿ ಮಾಡುವ ಅಭ್ಯಾಸ ಇಲ್ಲ ಎಂದರೆ ಗೊತ್ತಿಲ್ಲ. ನನ್ನ ತಮ್ಮ ಬದುಕಿರುವಾಗಲೇ ಪತ್ರಕ್ಕೆ ಸಹಿ ಮಾಡಿ ಹಣ ಪಡೆದುಕೊಂಡು ನಮ್ಮ ಹಕ್ಕನ್ನು ಬಿಟ್ಟು ಕೊಟ್ಟಿದ್ದೇನೆಂದರೆ ಸರಿಯಲ್ಲ ನೀವು ಮೋಸ ಮಾಡಿ ದಾಖಲೆ ಮಾಡಿಕೊಂಡಿರುತ್ತಾರೆಂದರು ಯಾವುದೇ ದೂರು ಕೊಟ್ಟಿದ್ದೀರಾ ಎಂದರೆ ಸಾಕ್ಷಿದಾರರು ನನಗೆ ಓದಲು ಬರೆಯಲು ಬರಲಿಲ್ಲ, ಆದ್ದರಿಂದ ಗೊತ್ತಾಗಲಿಲ್ಲ ಅನ್ನುತ್ತಾರೆ. ವಾದಿ, ನಾನು ಹಾಗೂ ಇತರರು ಹಣವನ್ನು ಪಡೆದುಕೊಂಡು ನಮ್ಮ ಹಕ್ಕನ್ನು ಬಿಡುಗಡೆ ಮಾಡಿದ್ದೇವೆಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿ ಭಾಗ ಕೊಡುತ್ತೇನೆಂದು ಹೇಳಿ ಸಹಿ ಮಾಡಿಸಿಕೊಂಡಿದ್ದಾರೆನ್ನುತ್ತಾರೆ.

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ವ ಒ

Sd/-

**(**ಎಂ ಸಿ ನಂಜೇಗೌಡ**)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ.